ಹೇಳುತ್ತಾರೆ. ಲೇಬರ್ ಕೋರ್ಟ್‌ಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡಿದೆಯೇ? ಹಾಕಿಕೊಂಡಿದ್ದರೆ ಈ ಕೇಸುಗಳನ್ನು ಇತ್ಯರ್ಥ ಮಾಡಲಿಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡುತ್ತಾರೆಯೇ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕಾಗಿ ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಲೇಬರ್ ಕೋರ್ಟ್‌ಗಳನ್ನು ಹೆಚ್ಚು ಮಾಡಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಈಗಾಗಲೇ ಇದರ ಬಗ್ಗೆ ವಿಚಾರಣೆ ನಡೆದಿದೆ. ಶಕ್ಯವಾದಷ್ಟು ಕೋರ್ಟ್‌ಗಳನ್ನು ದಾಲತ್ ಪದ್ಧತಿಯಂತೆ ಹೆಚ್ಚು ಮಾಡಿ ಈಗಿರತಕ್ಕ ವಿವಾದಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಕೃಷ್ಣಪ್ಪ.—ಹಿಂದಿನ ಸರ್ಕಾರದ ಮಂತ್ರಿಗಳು ಕೂಡ ಇದೇರೀತಿಯ ಹೇಳಿಕೆಯನ್ನು ಕೊಟ್ಟಿದ್ದರು ಆದನ್ನು ಭರವಸೆಯ ಸಮಿತಿಯಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದೇವೆ. ಯಾವಾಗ ಮಾಡುತ್ತೀರೆಂದು ನಿರ್ದಿಷ್ಟವಾಗಿ ಹೇಳಿ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತಿದೆಯೂ ಎಂಬುದನ್ನು ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಎಷ್ಟು ಲಗು ಮಾಡಲಿಕ್ಕೆ ಸಾಧ್ಯವೋ ಅಷ್ಟು ಲಗು ಮಾಡುತ್ತೇನೆ.

ಲಾಕಪ್‌ನಲ್ಲಿ ಆಗಿರುವ ಸಾವುಗಳು

೧೨೮. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೧೯೮೯ ಮಾರ್ಚ್‌ನಿಂದ ೧೯೯೦ರ ಏಪ್ರಿಲ್‌ವರೆಗೆ ಆಗಿರುವ ಲಾಕಪ್ ಸಾವುಗಳು ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಈ ಸಾವುಗಳನ್ನು ತಪ್ಪಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಇ) ಇದುವರೆವಿಗೂ ಆಗಿರುವ ಸಾವುಗಳ ಬಗ್ಗೆ ತನಿಖೆಗೆ ಆದೇಶಿಸಲಾಗಿದೆಯೇ?

ಈ) ತನಿಖೆಗಳಾಗಿದ್ದರೆ ತನಿಖಾ ವರದಿಗಳು ಬಂದಿವೆಯೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೯ನೇ ಮಾರ್ಚ್‌ನಿಂದ ೧೯೯೦ರ ಏಪ್ರಿಲ್‌ವರೆಗೆ ಒಟ್ಟು ೬ ಜನರು ಪೋಲೀಸ್ ತಹಬದಿಯಲ್ಲಿ ಮೃತಪಟ್ಟಿದ್ದು ಆ ಪೈಕಿ ಒಬ್ಬರು ಪೋಲೀಸ್ ಲಾಕಪ್‌ನಲ್ಲಿ ಮೃತಪಟ್ಟಿರುತ್ತಾರೆ.

ಜಿಲ್ಲಾವಾರು ವಿವರಗಳು ಈ ಕೆಳಗಿನಂತೆ ಇವೆ.

೧.	ಗುಲ್ಬರ್ಗಾ ಜಿಲ್ಲೆ	೨
೨.	ಬೆಂಗಳೂರು ಜಿಲ್ಲೆ	೨
೩.	ಬೆಂಗಳೂರು ನಗರ	೧
೪.	ಬಳ್ಳಾರಿ ಜಿಲ್ಲೆ	೧

ಆ) ಠಾಣೆಗಳಲ್ಲಿ ಈ ರೀತಿಯಾದ ಸಾವುಗಳು ಸಂಭವಿಸದಂತೆ ನೋಡಿಕೊಳ್ಳಲು ಕಟ್ಟುನಿಟ್ಟಿನ ಸೂಚನೆಗಳನ್ನು ಎಲ್ಲಾ ಯೂನಿಟ್ ಅಧಿಕಾರಿಗಳಿಗೆ ಹಾಗೂ ಠಾಣೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಹಾಗೂ ಇಂತಹ ಘಟನೆಗಳು ಸಂಭವಿಸದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸಹ ವಹಿಸಲಾಗಿದೆ ಇಂತಹ ಘಟನೆಗಳು ನಡೆದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಪೂರ್ಣ ಜವಾಬ್ದಾರರನ್ನಾಗಿ ಮಾಡುವುದಲ್ಲದೆ ಅಂತಹ ಪ್ರತಿಯೊಂದು ಪ್ರಕರಣಗಳನ್ನು ಕೂಡಲೇ ಹಿರಿಯ ಅಧಿಕಾರಿಗಳ ಮೂಲಕ ವಿಚಾರಣೆಯನ್ನು ನಡೆಸಿ ನಿರ್ಲಕ್ಷ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ. ಒಂದು ಪಕ್ಷ ಇಂತಹ ಘಟನೆಗೆ ಠಾಣಾಧಿಕಾರಿಗಳು ಕಾರಣವಾಗಿದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಮೊಕದ್ದಮೆಯನ್ನು ಹೂಡಾಯಿಸಿಕೊಂಡು ಸಿ. ಒ. ಡಿ.ಯಿಂದ ಪೂರ್ಣ ತನಿಖೆ ನಡೆಸುವ ಕ್ರಮ ಕೈಗೊಳ್ಳಲಾಗುವುದು ವಿಚಾರಣೆಯಿಂದ ಪ್ರಕರಣವು ಸಾಭೀತುಪಟ್ಟಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು.

ಇ) ಹೌದಂ -

ಈ) ಎರಡು ಪ್ರಕರಣಗಳಲ್ಲಿ ವರದಿಗಳು ಬಂದಿವೆ. ಒಂದು ಪ್ರಕರಣದಲ್ಲಿ ಸ್ವಾಭಾವಿಕ ಮರಣ ವಾಗಿದ್ದು, ಇನ್ನೊಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣವಾಗಿದೆ. ಇನ್ನು ಉಳಿದ ಪ್ರಕರಣಗಳಲ್ಲಿ ವರದಿಗಳನ್ನು ನಿರೀಕ್ಷಿಸಲಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಲಾಕಪ್‌ನಲ್ಲಿ ಸಾವು ಆಗತಕ್ಕದ್ದು ಬಹಳ ಮಹತ್ವವಾದ ವಿಚಾರ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇದನ್ನು ನಾವು ಸಿ.ಓ.ಡಿ.ಯ ಮೂಲಕ ತನಿಖೆ ಮಾಡಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾನಾದರೂ ಮುಖ್ಯಮಂತ್ರಿಯವರನ್ನು ಕೇಳಬಯಸುವುದೇನೆಂದರೆ, ಸಿ.ಓ.ಡಿ. ಮೂಲಕ ತನಿಖೆ ಮಾಡತಕ್ಕದ್ದು ಸರಿ, ಏಕೆಂದರೆ ನಮ್ಮಲ್ಲಿ ಬೇರೆ ಯಾವುದೇ ಆರ್ಗನೈಜೇಷನ್ ಇಲ್ಲ, ಆದರೆ ಅನೇಕ ಸಂದರ್ಭಗಳಲ್ಲಿ ಉನ್ನತ ಅಧಿಕಾರಿಗಳು ತನಿಖೆ ಮಾಡತಕ್ಕದೇ ಹೋದರೆ ಪ್ರಯೋಜನವಾಗುವುದಿಲ್ಲ. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಅಥವಾ ಸಬ್‌ಇನ್ಸ್‌ಪೆಕ್ಟರ್ ತನಿಖೆ ಮಾಡಬೇಕೆಂದು ಸಿ.ಓ.ಡಿ. ಯಿಂದ ಕಳುಹಿಸುತ್ತಾರೆ. ಅವರಿಂದ ಉಪಯೋಗವಾಗುವುದಿಲ್ಲ. ಆದರಿಂದ ಒಂದು ರೀತಿಯ ಹೊಂದಾಣಿಕೆಯಾಗುತ್ತದೆ. ಆದರೆ ಲಾಕಪ್‌ನಲ್ಲಿ ಸಾಯತಕ್ಕ ಸಂದರ್ಭದಲ್ಲಿ ಕನಿಷ್ಠ ಪಕ್ಷ ಡಿ.ಐ.ಜಿ. ಮಟ್ಟದ ಅಧಿಕಾರಿಗಳಿಂದ ತನಿಖೆ ಆಗಬೇಕು ಇದನ್ನು ಸರ್ಕಾರ ಆಜ್ಞೆ ಮಾಡಲಿಕ್ಕೆ ಸಾಧ್ಯವೇ ? ಎರಡನೆಯದಾಗಿ ಈ ವಿಚಾರಣೆಗೆ ಸಮಯ ನಿಗದಿ ಮಾಡಬೇಕು, ಬೇರೆ ಕಡೆ ಸಾವು ಎಂದರೆ ಪರವಾಗಿಲ್ಲ, ಲಾಕಪ್‌ನಲ್ಲಿ ಸಾವು ಆಗುತ್ತದೆ ಎಂದು ಹೇಳಿದರೆ ಬಹಳ ನೋವನ್ನು ಉಂಟು ಮಾಡತಕ್ಕ ಗಂಭೀರವಾದ ಒಂದು ಪ್ರಕರಣ. ತಾವು ಗುಲ್ಬರ್ಗದಲ್ಲಿ ಇದರ ಬಗ್ಗೆ ಪತ್ರಿಕಾ ಸಂದರ್ಶನದಲ್ಲಿ ಮಾತನಾಡುತ್ತಾ ಇದರ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಿದೀರಿ. ಆದರೆ ಇದಕ್ಕೆ ಸಮಯ ನಿರ್ಧಾರ ಮಾಡತಕ್ಕದ್ದು, ಹಾಗೂ ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ಮಾಡಿದರೆ ಮಾತ್ರ ಸತ್ಯ ಹೊರಗಡೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಈ ರೀತಿ ಲಾಕಪ್‌ನಲ್ಲಿ ಯಾರು ಮರಣ ಹೊಂದುತ್ತಿದ್ದರು, ಆ ಬಗ್ಗೆ ಅಲ್ಲಿನ ಉನ್ನತ ಅಧಿಕಾರಿಗಳು ವಿಚಾರಣೆ ಮಾಡುತ್ತಿದ್ದರು. ಇದು ಮೇಲ್ಮನೆಯಲ್ಲಿ ಚರ್ಚೆಗೆ ಬಂದಾಗ ಶ್ರೀಮಾನ್ ಸಿಂಧ್ಯರವರು ಹಾಗೂ ನಮ್ಮ ಪಕ್ಷದ ಒಬ್ಬ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದ ವಿಷಯ ಏನೆಂದರೆ,ಅಲ್ಲಿ ಕೆಲಸ ಮಾಡುವಂತಹ ಮೇಲ್ವರ್ಗದ ಸೀನಿಯರ್ ಆಫೀಸರ್ಸ್‌ಗೆ ನೀವು ವಿಚಾರಣೆ ಮಾಡಲು ಹೇಳಿದರೆ. ಅವರು ಯಾವತ್ತೋ ಅಲ್ಲಿಗೆ ಹೋಗುತ್ತಾರೆ, ಅವರಿಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಅದೇ ಅಧಿಕಾರಿ ಮಾಡುತ್ತಿರುತ್ತಾರೆ. ಆದಕ್ಕಾಗಿ ಅನುಕಂಪದ ಆಧಾರದ ಮೇಲೆ ವಿಚಾರಣೆ ಮಾಡಲು ಪ್ರಯತ್ನ ಮಾಡುತ್ತಾರೆ. ಆದಕ್ಕಾಗಿ ಇದನ್ನು ಪ್ರತ್ಯೇಕವಾಗಿ ಒಂದು ಇಂಪಾರ್ಷಿಯಲ್ ಆಗಿ ವಿಚಾರಣೆ ಮಾಡಬೇಕಾದರೆ ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ಅವರಂ ಸಲಹೆ ಮಾಡಿದ್ದನ್ನು ನಾನು ಒಪ್ಪಿಕೊಂಡು ಲಾಕಪ್‌ನಲ್ಲಿ ಎಷ್ಟು ಡೆತ್ ಆಗುತ್ತದೆ, ಅದನ್ನು ಸಿ.ಓ.ಡಿ ಯಿಂದ ತನಿಖೆ ಮಾಡಿಸಬೇಕು ಎನ್ನುವಂತಹ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಈ ನಿರ್ಣಯವನ್ನು ನೀವು ಸ್ವಾಗತ ಮಾಡಿದ್ದೀರಿ. ಸಿ.ಓ.ಡಿ. ಅವರಿಗೆ ಒಂದು ಕಾಲ ನಿಗದಿ ಮಾಡಿ ಇಷ್ಟು ದಿವಸದಲ್ಲಿ ವರದಿಯನ್ನು ಸಲ್ಲಿಸಬೇಕೆಂದು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ ಅವರಿಗೆ ಕೆಲಸದ ಒತ್ತಡ ಜಾಸ್ತಿ ಇದೆ. ಅಲ್ಲಿ ಕೆಲಸ ಹೆಚ್ಚಾಗಿದೆ, ಸಿಬ್ಬಂದಿ ಕಡಿಮೆ ಇದ್ದಾರೆ. ಇಂತಹ ದಿವಸದಲ್ಲಿ ಇಷ್ಟು ತಿಂಗಳಿನಲ್ಲಿ ಇದರ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಿ ಎಂದು ಕಟ್ಟಪ್ಪಣೆ ಮಾಡುವುದು ಕಷ್ಟ. ಆದರೆ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುವುದರಲ್ಲಿ ಹಿಂದು ಮುಂದು ನೋಡಬೇಕಾದ ಅವಶ್ಯಕತೆ ಇಲ್ಲ,

೧೨.೦೦ ಪಿ.ಎಂ.

ಮತ್ತೆ ಸಿ.ಓ.ಡಿ. ಯಲ್ಲಿಯೂ ಕೂಡಾ ಕೆಳದರ್ಜೆ ಜನ ಹೋಗುತ್ತಾರೆ ಎನ್ನತಕ್ಕಂಥ ಮಾತನ್ನು ಒಪ್ಪಿಕೊಳ್ಳುವ ಹಾಗೆ ಇಲ್ಲ. ಏಕೆಂದರೆ ಮಾನ್ಯ ಸದಸ್ಯರು ಕೂಡಾ ಸರ್ಕಾರದಲ್ಲಿದ್ದರು. ಇವತ್ತು ಅನೇಕ ಕಡೆ ಗಲಭೆಯಾದಾಗ ಅದರ ತನಿಖೆಯನ್ನು ಸಿ.ಓ.ಡಿ.ಗೆ. ಒಪ್ಪಿಸಬೇಕು ಯಾವ ರೀತಿ ಕೇಂದ್ರದಲ್ಲಿ ಸಿ.ಬಿ.ಐ.ಗೆ ಒಪ್ಪಿಸಬೇಕು ಎನ್ನತಕ್ಕಂಥ ಒಂದು ಕೂಗೂ ಬರುತ್ತದೋ ಅದೇ ರೀತಿ ಸಿ.ಓ.ಡಿ.ಗೆ ಒಪ್ಪಿಸಬೇಕು ಎನ್ನತಕ್ಕಂಥ ಕೂಗು ಇರುತ್ತದೆ. ಆದಕ್ಕಾಗಿ ಇವತ್ತು ಒಂದು ಮಾನ್ಯತೆ ಪಡೆದಂಥ ಒಂದು ಇಂಡಿಪೆಂಡೆಂಟ್ ಆರ್ಗನೈಜೇಷನ್ ಗೌರ್ನಮೆಂಟಿನಲ್ಲಿ ಸಿ.ಓ.ಡಿ. ಆಗಿರುವುದರಿಂದ ಸಿ.ಓ.ಡಿ. ತನಿಖೆಗೆ ಯಾವುನೋ ಒಬ್ಬ ಬೇಜವಾಬ್ದಾರಿ ಕೆಳದರ್ಜೆಯ ಅಧಿಕಾರಿ, ಅಧಿಕಾರ ಮಾಡುತ್ತಾನೆ ಎಂದು ಹೇಳುವುದು ಅಷ್ಟೊಂದು ಸರಿಯಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದಕ್ಕೆ ಬಯಸಿದ್ದು ನಾನು ಸಿ.ಓ.ಡಿ.ಯ competency ಯನ್ನು ಪ್ರಶ್ನೆ ಮಾಡಲಿಲ್ಲ. ಸಿ.ಓ.ಡಿ.ಯ ಮೂಲಕ ತಾವು ಏನು ತನಿಖೆ ಮಾಡಿಸುತ್ತೀವಿ ಎಂದು ಹೇಳಿ ನಿರ್ಧಾರ ಮಾಡಿರತಕ್ಕಂಥದ್ದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ಏನಾಗುತ್ತದೆ ಎಂದರೆ ಇದು ಬೇರೆ ಡೆಥ್ಸ್ ಅಲ್ಲ, ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಸಬ್ ಇನ್ಸ್‌ಪೆಕ್ಟರೋ ಇದರಲ್ಲಿ ರೆಸ್ಪಾನ್ಸಿಬಲ್ ಇರುತ್ತಾರೆ. ಆದರಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿ ಎನ್‌ಕ್ವೈರಿ ಮಾಡುತ್ತಾನೆ ಎಂದು ಹೇಳಿದರೆ ಏನು ಅರ್ಥ? ಆದಕ್ಕಾಗಿ ತಾವು ಲಾಕಪ್‌ನಲ್ಲಿ ಸಾಯತಕ್ಕಂಥ ಪ್ರಕರಣಗಳಲ್ಲಿ ಏನು ತನಿಖೆಗೆ ಆಜ್ಞೆ ಮಾಡುತ್ತೀರೋ, ಆದು ಸಿ.ಓ.ಡಿ ಯಲ್ಲಿ ಐ.ಜಿ.ಪಿ. ಲೆವೆಲ್‌ನಲ್ಲಿ ಅಧಿಕಾರಿಗಳಿದ್ದಾರೆ, ಎ.ಐ.ಜಿ. ಮಟ್ಟದ ಅಧಿಕಾರಿಗಳಿದ್ದಾರೆ. ಆ ರೀತಿ ಉನ್ನತ ಮಟ್ಟದ ಅಧಿಕಾರಿಗಳು ಹೋಗಬೇಕು ಎನ್ನತಕ್ಕಂಥ ಅಪ್ಪಣೆಯನ್ನು ಮಾಡಬೇಕು ಎಂದು ನಾನು ತಪ್ಪು ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ ನೀವು ಸಮಯವನ್ನು ನಿರ್ಧಾರ ಮಾಡುವುದು ಕಷ್ಟ ಎಂದು ಹೇಳುತ್ತೀರಿ. These are not ordinary deaths. ಇಡೀ ವರ್ಷದಲ್ಲಿ ಆರೇಳು ಸಾವುಗಳು ಆಗಿದೆ. ಇದು ಬಹಳ ಮಹತ್ವರವಾಗಿರತಕ್ಕಂಥದ್ದು. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಸಬ್-ಇನ್ಸ್‌ಪೆಕ್ಟರ್ ಅಥವಾ ಡಿವೈಎಸ್‌ಪಿಯನ್ನು ಒಂದು ಮಾತ್ರಕ್ಕೆ ರೆಸ್ಪಾನ್ಸಿಬಲ್ ಇದ್ದಾನೆ ಎಂದು ಹೇಳಿದರೆ ಆ ಅಧಿಕಾರಿ ಎರಡು ಮೂರು ವರ್ಷವಾದ ಮೇಲೆ ವರದಿಯನ್ನು ಕೊಟ್ಟರೆ ಏನು ಉಪಯೋಗ ಆಗುತ್ತದೆ ? ಇದರಿಂದ ದಯವಿಟ್ಟು ಮೂರು ತಿಂಗಳೋ, ಆರು ತಿಂಗಳೋ, ನಾನು ವರ್ಷಾನುಗಟ್ಟಲೇ ಎಂದು ಹೇಳುವುದಿಲ್ಲ. ಮೂರು ತಿಂಗಳು, ಆರು ತಿಂಗಳ ಒಳಗಡೆ ವರದಿಯನ್ನು ಕೊಡುವಂತಾಗಬೇಕು. ೧೯೮೮—೮೯ರ ಸಾಲಿನಲ್ಲಿ ಒಂದು ವರ್ಷದಲ್ಲಿ ಸಿ.ಓ.ಡಿ. ತನಿಖೆಯಾಗಿ ಎರಡು ವರದಿಗಳು ಬಂದಿದೆ, ಇನ್ನು ಎರಡು ಬಂದಿಲ್ಲ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಯಾವಾಗ ಆ ವರದಿಗಳು ಬರುತ್ತದೆ? ಅಷ್ಟು ಹೊತ್ತಿಗೆ ಆ ಅಧಿಕಾರಿ ನಿವೃತ್ತಿ ಯಾಗಿರುತ್ತಾನೆ ಅಥವಾ ಬೇರೆ ಕಡೆ ವರ್ಗಾವಣೆಯಾಗಿರುತ್ತಾನೆ. ಇದರಿಂದ ಆಗುವ ಉಪಯೋಗವೇನು? ಒಟ್ಟಿನಲ್ಲಿ ಪೋಲೀಸ್ ಅಧಿಕಾರಿಗಳ ಮೇಲೆ ಒಂದು ಬಿಗಿ ಬರಬೇಕಾದರೆ ಸಮಯ ನಿಗದಿ ಆಗಬೇಕು ಮತ್ತು ಅಲ್ಲಿಗೆ ಉನ್ನತ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಮತ್ತೊಮ್ಮೆ ತಮ್ಮಲ್ಲಿ ಅಗ್ರಹಪಡಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಸಮಯ ನಿಗದಿ ಮಾಡುವುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಪ್ರಿಫರೆನ್ಸ್‌ನ್ನು ಕೊಟ್ಟರು ಜಾಗ್ರತೆ ಆಗಬೇಕೆಂದು ಒತ್ತಾಯ ಮಾಡಬಹುದು. ಮತ್ತು ಈ ತರಹ ಘಟನೆಗಳನ್ನು ಬಹಳ ತೀವ್ರ ಗತಿಯಿಂದ ಪರಿಶೀಲನೆ ಮಾಡಬೇಕು ಮತ್ತು ಇಂಥಾದ್ದನ್ನು ಸೀರಿಯಸ್ ಆಗಿ ಸರ್ಕಾರ ನೋಟೀಸ್‌ಗೆ ತೆಗೆದು ಕೊಳ್ಳುತ್ತದೆ ಎನ್ನತಕ್ಕಂಥ ವಿಚಾರವನ್ನು ಕೂಡಾ ಎಲ್ಲಾ ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತು ಈ ರೀತಿ ಲಾಕಪ್‌ನಲ್ಲಿ ಏನು ಮರಣ ಹೊಂದ್ದಾರೋ ಇದು ಅನೇಕ ಕಡೆ ಆಗಿದೆ, ನನ್ನ ಹತ್ತಿರ ಸವಿಸ್ತಾರ ವರದಿ ಇದೆ. ಲಾಕಪ್‌ನಲ್ಲಿ ಮರಣ ಹೊಂದಿದಿಂಥ ಪ್ರಕರಣಗಳಲ್ಲಿ ಅಲ್ಲಿರುವಂಥ ಸಿಬ್ಬಂದಿ ವರ್ಗದವರಿಗೆ ೩೦೭ರ ಪ್ರಕಾರ ಅವರನ್ನು ಅರೆಸ್ಟ್ ಮಾಡಿದ್ದೇವೆ, ಸಸ್ಪೆಂಡ್ ಮಾಡಿದ್ದೇವೆ ಮತ್ತು ಕೋರ್ಟ್‌ನಲ್ಲಿ ಕೇಸ್‌ನ್ನು ಕೂಡಾ ಹಾಕಿದ್ದೇವೆ. ಅದಕ್ಕಾಗಿ ಅಲ್ಲಿ ಇರುವಂಥ ಅಧಿಕಾರಿಗಳ ಬಗ್ಗೆ ನಾವು ಏನ ಲೀನಿಯೆಂಟ್ ಆಟಿಟ್ಯೂಡ್‌ನ್ನು ತೆಗೆದುಕೊಳ್ಳವುದಿಲ್ಲ, ತೆಗೆದುಕೊಳ್ಳುವಂಥ ವಿಚಾರವೂ ಕೂಡಾ ಸರ್ಕಾರಕ್ಕೆ ಇಲ್ಲ. ಇಲ್ಲಿ ಪ್ರಶ್ನೆ ಏನು ಎಂದು ಹೇಳಿದರೆ, ಈ ತನಿಖೆ ಆದಷ್ಟು ಜಾಗ್ರತೆ ಆಗಬೇಕು. ಇಷ್ಟು ಮಾತ್ರ ಹೇಳುತ್ತೇನೆ ಸಿ.ಓ.ಡಿ. ಉನ್ನತ ಅಧಿಕಾರಿಗಳ ಜೊತೆಯಲ್ಲಿ ಈ ಬಗ್ಗೆ ಸಮಾಲೋಚನೆಯನ್ನು ಮಾಡಿ ಇದಕ್ಕೆ ಹೆಚ್ಚು ಪ್ರಿಫರೆನ್ಸ್‌ನ್ನು ಕೊಟ್ಟು ಕೇಸುಗಳನ್ನು ಆದಷ್ಟು ತೀವ್ರವಾಗಿ ನಿಕಾಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಅಧಿಕಾರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಪರಿಶಿಷ್ಟ ಜಾತಿಗೆ ಸೇರಿದ ಐಎಎಸ್ ಅಧಿಕಾರಿಗಳ ಬಗ್ಗೆ

೧೬೨. ಶ್ರೀ ಎಂ. ಪಿ. ವೆಂಕಟೇಶ್ (ಮೆಗ್ಗಡದೇವನಕೋಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಪರಿಶಿಷ್ಟ ಜಾತಿಗೆ ಸೇರಿದ ಎಷ್ಟು ಜನ ಐಎಸ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. (ಅಧಿಕಾರಿಗಳ ವಿವರ ಮತ್ತು ಜಿಲ್ಲೆಗಳನ್ನು ಒದಗಿಸುವುದು.)

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

೧) ಶ್ರೀ ಆಶೋಕ್ ಕುಮಾರ್ ಸಿ. ಮನೋಲಿ, ಜಿಲ್ಲಾಧಿಕಾರಿ, ಬಳ್ಳಾರಿ.

೨) ಶ್ರೀ ಎನ್. ಸಿ. ಮುನಿಯಪ್ಪ, ಜಿಲ್ಲಾಧಿಕಾರಿ, ಚಿತ್ರದುರ್ಗ